ಆ) ೧೯೭೭–೭೮ರ ಕಟ್ಟಡಗಳನ್ನು ಪೂರ್ಣಗೊಳಿಸುವ ಉದ್ದೇಶವಿದ್ದುದರಿಂದ ತಾತ್ಕಾಲಿಕವಾಗಿ ಈ ಕೆಳಕಂಡ ದರವನ್ನು ನಿಗದಿ ಮಾಡಲಾಯಿತು.

ಮಧ್ಯಮ ಆದಾಯ ವರ್ಗ	...	ರೂ ೪೦, ೦೦೦. ೦೦
ಅಲ್ಪ ಆದಾಯ ವರ್ಗ	...	ರೂ ೨೩, ೬೦೦, ೦೦
ಆರ್ಥಿಕವಾಗಿ ಹಿಂದುಳಿದ ವರ್ಗ	...	ರೂ ೧೬, ೩೦೦. ೦೦

೧೯೮೨–೮೩ ನೆಯ ಸಾಲಿನಲ್ಲಿ ಕೆಲಸ ಪೂರ್ಣಗೊಂಡ ನಂತರ ಕೊನೆಯದಾಗಿ ಮಾಡಿದ ದರ ಈ ಕೆಳಕಂಡಂತೆ ಇರುತ್ತದೆ.

ಮಧ್ಯಮ ಆದಾಯ ವರ್ಗ	...	ರೂ ೭೮, ೦೦೦. ೦೦
ಅಲ್ಪ ಆದಾಯ ವರ್ಗ	...	ರೂ ೫೫, ೮೦೦. ೦೦
ಆರ್ಥಿಕವಾಗಿ ಹಿಂದುಳಿದ ವರ್ಗ	...	ರೂ ೩೫, ೦೦೦. ೦೦

ಇ) ಬೀರನಹಳ್ಳಿ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಮನೆಗಳನ್ನು ಕಟ್ಟಲು ಉದ್ದೇಶಿಸಿದ ಕಾರಣ ಈ ಪ್ರದೇಶದಲ್ಲಿ ಸುಭದ್ರವಾದ ಕಟ್ಟಡದ ತಳಪಾಯ ಹಾಗೂ ಅಂದಾಜಿನಲ್ಲಿದ್ದ ಕೆಲಸಗಳಿಗಿಂತ ಹೆಚ್ಚುವರಿ ಕೆಲಸಗಳನ್ನು ಮಾಡಬೇಕಾಗಿ ಬಂದ ಕಾರಣ ಹಾಗೂ ಕಟ್ಟಡ ಸಾಮಾಗ್ರಿಗಳಾದ ಸಿಮೆಂಟ್, ಕಬ್ಬಿಣದ ಬೆಲೆ ಮತ್ತು ಅಂದಾಜು ಪಟ್ಟಿಯ ದರಗಳು ಹೆಚ್ಚಾಗಿದ್ದರಿಂದ ಎಲ್ಲಾ ಕಟ್ಟಡಗಳ ಬೆಲೆಯೂ ಹೆಚ್ಚಾಗಿದ್ದರಿಂದ, ಇದನ್ನು ಸರಿದೂಗಿಸಲು ಹೆಚ್ಚಿನ ದರವನ್ನು ನಿಗದಿ ಮಾಡಲಾಯಿತು.

ಈ) ಸರ್ಕಾರದ ಗಮನಕ್ಕೆ ಬಂದಿದೆ. ಮೇಲ್ಕಂಡ ಕಾರಣಗಳಿಂದ ಕಟ್ಟಡಗಳ ನಿರ್ಮಾಣ ವೆಚ್ಚ ಅಧಿಕವಾದುದರಿಂದ ಪೂರ್ಣಗೊಂಡ ಮನೆಗಳ ಬೆಲೆಯನ್ನು ಗೃಹ ಮಂಡಳಿಯು ಹೆಚ್ಚಿಸುವುದು ಅನಿವಾರ್ಯವಾಯಿತು, ಹಂಚಿಕೆದಾರರಿಗೆ ಆರ್ಥಿಕವಾಗಿ ಹೊರೆಯಾಗದಂತೆ ಹಂಚಿಕೆಯು ಹೆಚ್ಚುವರಿ ಹಣವನ್ನು ಕಂತುಗಳ ಮೂಲಕ ಪಾವತಿ ಮಾಡಲು ಅವಕಾಶ ನೀಡಲಾಗಿದೆ.

ಮೂಡಿಗೆರೆ ತಾಲ್ಲೂಕಿನಲ್ಲಿ ವಿದ್ಯುತ್ ದೀಪ ಒದಗಿಸುವ ಬಗ್ಗೆ

೬೬. ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ನೀರಾವರಿ, ಲೋಕೋಪಯೋಗಿ ಮತ್ತು ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಇದುವರೆವಿಗೂ ಎಷ್ಟು ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ, ಬಾಕಿ ಉಳಿದಿರುವ ಗ್ರಾಮಗಳೆಷ್ಟು ?

ಆ) ಈ ಗ್ರಾಮಗಳ ಎಲ್ಲಾ ಹರಿಜನ–ಗಿರಿಜನ ಕೇರಿಗಳಿಗೂ ವಿದ್ಯುತ್ ದೀಪ ಒದಗಿಸಲಾಗಿದೆಯೇ ?

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ, ಲೋಕೋಪಯೋಗಿ ಮತ್ತು ಇಂಧನ ಸಚಿವರು).—

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ೧೯೮೧ರ ಜನಗಣತಿ ಪ್ರಕಾರ ೧೪೦ ರೆವಿನ್ಯೂ ಗ್ರಾಮಗಳಿದ್ದು ಇವುಗಳ ಪೈಕಿ ೧೩೯ ಜನ ವಾಸಿಸುವ ರೆವಿನ್ಯೂ ಗ್ರಾಮಗಳಿಗೆ ವಿದ್ಯುತ್ ಒದಗಿಸಲಾಗಿದೆ. ಒಂದು ಗ್ರಾಮ ಬೇಚರಾಕ್ ಆಗಿರುವುದರಿಂದ ವಿದ್ಯುತ್ ಒದಗಿಸಿಲ್ಲ ಹೀಗಾಗಿ ಯಾವ ಗ್ರಾಮವೂ ಬಾಕಿ ಉಳಿದಿಲ್ಲ.

ಆ) ಇಲ್ಲಾ.

ಇ) ಮೂಡಿಗೆರೆ ತಾಲ್ಲೂಕಿನಲ್ಲಿರುವ ೧೯೪ ಹರಿಜನ ಕೇರಿಗಳ ಪೈಕಿ ೧೨೯ ಹರಿಜನ ಕೇರಿಗಳಿಗೆ ವಿದ್ಯುತ್ ದೀಪವನ್ನು ಒದಗಿಸಲಾಗಿದೆ, ಬಾಕಿ ಉಳಿದ ೬೫ ಹರಿಜನ ಕೇರಿಗಳಿಗೆ ವಿದ್ಯುತ್ ದೀಪವನ್ನು ಒದಗಿಸಲು ಸ್ಕೀಮನ್ನು ತಯಾರಿಸಲು ಅಂಕಿ ಅಂಶಗಳನ್ನು ಸಂಗ್ರಹಿಸಲಾಗುತ್ತಿದ್ದು ಸ್ಕೀಮನ್ನು ತಯಾರಿಸಿ ಗ್ರಾಮೀಣ ವಿದ್ಯುದ್ದೀಕರಣ ನಿಗಮದವರ ಮಂಜೂರಾತಿಗಾಗಿ ಕಳುಹಿಸಲಾಗುವುದು.

ಸದರಿ ತಾಲ್ಲೂಕಿನಲ್ಲಿರುವ ೧೨೫ ಗಿರಿಜನ ಕೇರಿಗಳ ಪೈಕಿ ೪೪ ಗಿರಿಜನ ಕೇರಿಗಳಿಗೆ ವಿದ್ಯುತ್ ದೀಪವನ್ನು ಒದಗಿಸಲಾಗಿದೆ. ಬಾಕಿ ಉಳಿದ ೮೧ ಗಿರಿಜನ ಕೇರಿಗಳಿಗೆ ವಿದ್ಯುತ್ ದೀಪ ಒದಗಿಸಲು ಗ್ರಾಮೀಣ ವಿದ್ಯುದ್ದೀಕರಣ ನಿಗಮದಿಂದ ಒಂದು ಸ್ಕೀಮು ಮಂಜೂರಾಗಿದ್ದು ವಿದ್ಯುತ್ ದೀಪ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.